100 (515) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿವೇಶನ ರಹಿತ ದುರ್ಬಲ ವರ್ಗದವರು ಸರ್ಕಾರ ಜಾಗದಲ್ಲಿ ಮನೆ ಕಟ್ಟಿ ವಾಸ್ತವ್ಯ ಇರುವವರಿಗೆ ನಿವೇಶನದ ಹಕ್ಕುಪತ್ರ ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ?

ಆ) ಹಾಗಿದ್ದಲ್ಲಿ ಆ ಜಾಗವನ್ನು ಸಕ್ರಮಗೊಳಿಸಲು ಅವಕಾಶ ಮಾಡಿಕೊಡಲಾಗುವುದೇ?

ಇ) ಅಕ್ರಮ ಸಕ್ರಮ ಯೋಜನೆಯು ಕೇವಲ ನಗರ ಪ್ರದೇಶಕ್ಕೆ ಅಥವಾ ತಾಲ್ಲೂಕು ಪಟ್ಟಣಕ್ಕೆ ಸಂಬಂಧಿಸಿದೆಯೆ (ವಿವರ ಒದಗಿಸುವುದು);

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಮತ್ತು ಆ) ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 94ಸಿ ಪ್ರಕಾರ ಸರ್ಕಾರಿ ಜಮೀನುಗಳನ್ನು ದಿ: 14–4–1998ರ ಪೂರ್ವದಲ್ಲಿ ಮನೆ ಕಟ್ಟಿ ವಾಸ ಇರುವ ಬಡ ಕುಟುಂಬದವರಿಗೆ ಅಂತಹವರ ಅನಧಿಕೃತ ಮನೆಗಳನ್ನು ಸಕ್ರಮೀಕರಣಗೊಳಿಸಲು ದಿ: 31.12.2001 ರೊಳಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ನಿಗದಿತ ಅವಧಿಯಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಅರ್ಹತೆ ಅನುಸಾರ ಮಂಜೂರು ಮಾಡಿ ಹಕ್ಕು ಪತ್ರ ನೀಡಲು ಅವಕಾಶವಿದೆ.

ಇ) ಇದನ್ನು ನಗರ ಪ್ರದೇಶಕ್ಕೆ ಹಾಗೂ ತಾಲ್ಲೂಕು, ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಕ್ಕೂ ಅನ್ವಯಿಸಲಾಗಿತ್ತು.

ರಾಜೀವ್‌ಗಾಂಧಿ ವಿದ್ಯುತ್ ಯೋಜನೆ

102 (48) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ., (ಮಡಿಕೇರಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ ಗಾಂಧಿ ವಿದ್ಯುತ್ ಯೋಜನೆಯ ಗುತ್ತಿಗೆಯನ್ನು ಕೊಡಗು ಜಿಲ್ಲೆಯಲ್ಲಿ ಯಾವ ಕಂಪನಿಗೆ ನೀಡಲಾಗಿದೆ?

ಆ) ಈ ಕಂಪನಿಯವರು ಜಿಲ್ಲೆಯಲ್ಲಿ ವಿದ್ಯುತ್ ಸಂಪರ್ಕ ನೀಡಲು ವಿಳಂಬ ಮಾಡಲು ಕಾರಣವೇನು?

ಇ) ಈ ಕಂಪನಿಗೆ ಕೊಡಗು ಜಿಲ್ಲೆಯಿಂದ ಎಷ್ಟು ಮೊತ್ತದ ಹಣ ನೀಡಲಾಗಿದೆ?